1	2	3	4
19.	ವಾರ್ಡ್ ನಂ.6ರ ಎನ್.ಡಿ.ಪಿ. ಶಾಲೆಯಿಂದ ಶ್ರೀ ಬೇಟಿರಾಯಸ್ವಾಮಿ ದೇವಸ್ಥಾನದವರೆಗೆ ಮರುಡಾಂಬರೀಕರಣ	10,000=00	ಅಂದಾಜು ಪಟ್ಟಿಯನ್ನು ಮಂಜೂರಾತಿಗೆ ಸಲ್ಲಿಸಿರುತ್ತೆ.
20.	ವೈ.ಟಿ.ರಸ್ತೆಯಿಂದ ಶ್ರೀ ಬೇಟಿರಾಯಸ್ವಾಮಿ ದೇವಸ್ಥಾನದ ರಸ್ತೆಯವರೆಗೆ ಮತ್ತು ಬಿರ್ಲಾಕಾರ್ನರ್‌ನಿಂದ ಬಾಣಸಂದ್ರ ರಸ್ತೆಯವರೆಗೆ ಟಾರ್ ರಸ್ತೆಯ ಗುಂಡಿಗಳನ್ನು ಮತ್ತು ಅಂಚುಗಳನ್ನು ಮೆಚ್ಚಿಸುವುದು.	15,000=00	------''--------
	ಒಟ್ಟು	**ರೂ. 5, 17,000-00**	

ಪಟ್ಟಣ ಪಂಚಾಯಿತಿ ಕಾರ್ಯಾಲಯ, ತುರುವೇಕೆರೆ ಹುಡ್ಕೋ ನೆರವಿನಿಂದ ಕೈಗೊಳ್ಳಲಿರುವ ಅಭಿವೃದ್ಧಿ ಕಾಮಗಾರಿಗಳು.

ಕ್ರಮ ಸಂಖ್ಯೆ	ಕಾಮಗಾರಿಗಳ ವಿವರ ಮತ್ತು ಸ್ಥಳ	ಅಂದಾಜು ಮೊತ್ತ	ಪರಾ
1.	ವಿದ್ಯಾನಗರದಲ್ಲಿ ಮುಖ್ಯ ರಸ್ತೆ ಅಡ್ಡ ರಸ್ತೆ ಮಾಡಿಸುವುದು (ಜಲ್ಲಿ ರಸ್ತೆ ಚರಂಡಿ, ಬೀದಿ ದೀಪ)	6,00,000	ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ.
2.	ಶಕ್ತಿ ನಗರದಲ್ಲಿ	6,00,000	----''-----
3.	ಬಸವೇಶ್ವರ ನಗರದಲ್ಲಿ	6,00,000	----''-----
4.	ಗಾಂಧೀನಗರದಲ್ಲಿ	3,75,000	----''-----
5.	ದೇವೇಗೌಡ ಬಡಾವಣೆಯಲ್ಲಿ	3,25,000	----''-----
		ಜುಮ್ಲಾ ರೂ **.25,00,000** ಲಕ್ಷಗಳು	
	ಒಟ್ಟು ೨೫ ಲಕ್ಷ ರೂ.ಗಳು ಮಾತ್ರ		

ತರೀಕೆರೆ ತಾಲ್ಲೂಕಿನಲ್ಲಿ ಆಶ್ರಯ ಶಾಲೆಗಳು

292 (546) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿ, ಅಜ್ಜಲಪುರ, ಶಿವನಿಯಲ್ಲಿ ಆಶ್ರಮ ಶಾಲೆಗಳು, ಪರಿಶಿಷ್ಟ, ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಸ್ಟೆಲ್ ಕಟ್ಟಡದಳ ನಿರ್ಮಾಣಕ್ಕೆ ಬಿಡುಗಡೆಯಾದ ಹಣವೆಷ್ಟು?

ಅ) 1999-2000, ಮತ್ತು 2000-2001ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಶ್ರಮಶಾಲೆ ಕಟ್ಟಡಗಳ ನಿರ್ಮಾಣಕ್ಕೆ ಬಿಡುಗಡೆಯಾದ ಹಣವೆಷ್ಟು; ಮತ್ತು ಅವುಗಳ ಗುತ್ತಿಗೆದಾರರು ಯಾರು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1. ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿ ವಸತಿ ಶಾಲೆಯ ಕಟ್ಟಡ ಕಟ್ಟಲು 38.845 ಲಕ್ಷಗಳ ಅಂದಾಜಿನಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ, 20.00 ಲಕ್ಷ ರೂ.ಗಳನ್ನು ಮೊದಲಕಂತಾಗಿ ಕರ್ನಾಟಕ ಭೂ ಸೇನಾ ನಿಗಮಕ್ಕೆ ಬಿಡುಗಡೆ ಮಾಡಿದೆ.

2. ಅಜ್ಜಂಪುರದ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡವನ್ನು ರೂ.29.92 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ, ಕರ್ನಾಟಕ ಭೂ ಸೇನಾ ನಿಗಮಕ್ಕೆ ಮೊದಲ ಕಂತಿನ ಲ್ಲಿ ರೂ. 14.96 ಲಕ್ಷ ಬಿಡುಗಡೆ ಮಾಡಿದೆ.

3. ಆಶ್ರಮಶಾಲೆ ಶಿವನಿ ತರೀಕೆರೆ ತಾಲ್ಲೂಕು ಇದರ ಕಟ್ಟಡ ನಿರ್ಮಾಣಕ್ಕಾಗಿ ರೂ. 18.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) 1. 1999-2000ನೇ ಸಾಲಿನಲ್ಲಿ ಆಶ್ರಮಶಾಲೆಕೊಪ್ಪ, ಹೊಸಪುರ, ಸಂಸ್ಥೆ ಇವುಗಳ ದುರಸ್ತಿಗಾಗಿ ಹಾಗೂ ಆಶ್ರಮಶಾಲೆ ಸಂಸ್ಥೆ (ಕೇಂದ್ರ) ಸಂಸ್ಥೆ (ರಾಜ್ಯ) ಇಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ರೂ. 24. 885 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2. 2000-2001ನೇ ಸಾಲಿನಲ್ಲಿ ಆಶ್ರಮಶಾಲೆ ಶಿವನಿ ಇದರ ಕಟ್ಟಡ ನಿರ್ಮಾಣಕ್ಕಾಗಿ ರೂ. 18.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. 2000-2001ನೇ ಸಾಲಿನಲ್ಲಿ ಎಂ.ಸಿ.ಹಳ್ಳಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಮಾತ್ರ ರೂ.20.00 ಲಕ್ಷ ಬಿಡುಗಡೆ ಆಗಿದೆ. ದುರಸ್ತಿ ಮತ್ತು ಕಟ್ಟಡ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂ ಸೇನಾ ನಿಗಮ ಇವರಿಗೆ ವಹಿಸಲಾಗಿದೆ.

ತರೀಕೆರೆ ಪಂಚಾಯ್ತಿಯನ್ನು ಪುರಸಭೆಗೆ ಪರಿವರ್ತನೆ

293 (547) ಶ್ರೀ ಬಿ.ಆರ್.ನೀಲಕಂಠಪ್ಪ (ತರೀಕೆರೆ):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ತರೀಕೆರೆ ಪಟ್ಟಣ ಪಂಚಾಯ್ತಿಯನ್ನು ಪುರಸಭೆಯಾಗಿ ಪರಿವರ್ತಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ತರೀಕೆರೆ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಲು ತಗಲುವ ಅಂದಾಜು ವೆಷ್ಟು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಇಲ್ಲ

ಆ) ರೂ. 300.71 ಲಕ್ಷಗಳು.